ADM/97/2013

Office of the
District & Sessions Court,
Bangalore Rural District,
Basement Floor, City Civil
Court Complex, Bangalore–09,
Dated 22.03.2013.

No. 11495
Date 30-3-13

To

1. The Deputy Commissioner, Bangalore Urban District, Bangalore
2. The Deputy Commissioner, Bangalore Rural District, Bangalore
3. The Commissioner of Police, Bangalore City, Infantry Road, Bangalore
4. The Superintendent of Police, Bangalore Rural District, No.5, Millers Road, Bangalore
5. The Director, Technical Education Board, Sheshadri Road, Bangalore
6. The Principal, Government Polytechnic, K.R. Circle, Bangalore
7. The Principal, Government Women's Polytechnic, Sheshadri Road, Bangalore

Sir,

Sub: Notification regarding recruitment of candidates for the post of Stenographers

<> <> <>

With reference to the above, I am directed to forward herewith this office Notification in No. ADM/97/2013 dated 19.03.2013 regarding recruitment of candidates to the post of Stenographer, with a request to cause publication of the Notification in the notice board of your Court, for information of the eligible candidates.

Yours faithfully,

(H.S. SREEKANTAIAH)
Chief Administrative Officer,
District & Sessions Court,
Bangalore Rural District, Bangalore.

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ**
**ತಳಮಹಡಿ, ಸಿಟಿ ಸಿವಿಲ್ ನ್ಯಾಯಾಲಯ ಸಂಕೀರ್ಣ, ಬೆಂಗಳೂರು – 560 009.**

## ನೇಮಕಾತಿ ಅಧಿಸೂಚನೆ

**ಸಂಖ್ಯೆ : ಎಡಿಎಂ /97/2013 ದಿನಾಂಕ: 19.03.2013**

ವಿಷಯ: ಶೀಘ್ರಲಿಪಿಗಾರರ (Stenographer) ಹುದ್ದೆಗೆ ನೇಮಕಾತಿ ಬಗ್ಗೆ

ಉಲ್ಲೇಖ: 1) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರದ ಸಂಖ್ಯೆ
ಎಲ್‌ಸಿಎ- II.164/2009 (Sub File -2) ದಿನಾಂಕ 19.01.2011
2) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರದ ಸಂಖ್ಯೆ
ಎಲ್‌ಸಿಎ- II.36/2003 ದಿನಾಂಕ 23.06.2011
3) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಪತ್ರದ ಸಂಖ್ಯೆ
ಎಲ್‌ಸಿಎ-II.128/2012 ದಿನಾಂಕ 14.09.2012

---

ಬೆಂಗಳೂರು ಗ್ರಾಮಾಂತರ ಜಿಲ್ಲಾ ನ್ಯಾಯಾಲಯ ಘಟಕದ ನ್ಯಾಯಾಲಯಗಳಲ್ಲಿ ಖಾಲಿ ಇರುವ 17 (ಹದಿನೇಳು) ಶೀಘ್ರಲಿಪಿಗಾರರ (Stenographer) ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ನಿಗದಿಪಡಿಸಿದ ಅರ್ಜಿ ನಮೂನೆಯ ಬೆರಳಚ್ಚು ಪ್ರತಿ : ಗಣಕೀಕೃತ ಪ್ರತಿಯಲ್ಲಿಯೇ ಅಭ್ಯರ್ಥಿಗಳು **ತಮ್ಮ ಸ್ವಂತ ಕೈಬರಹದಿಂದ** ಎಲ್ಲಾ ಅಂಕಣಗಳನ್ನು ಜಾಗರೂಕತೆಯಿಂದ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

1. **ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 15.04.2013 ಸಂಜೆ 4-00 ಗಂಟೆ.**

2. **ಅರ್ಜಿಗಳನ್ನು ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು :**

   **ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
   **ಬೆಂಗಳೂರು ಗ್ರಾಮಾಂತರ ಜಿಲ್ಲೆ**
   **ತಳ ಮಹಡಿ, ನಗರ ಸಿವಿಲ್ ನ್ಯಾಯಾಲಯಗಳ ಸಂಕೀರ್ಣ,**
   **ಬೆಂಗಳೂರು-560 009.**

3. ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣ:

   17 ( ಹದಿನೇಳು ) ಹುದ್ದೆ

| ವರ್ಗೀಕರಣ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಅಂಗವಿಕಲ | ಒಟ್ಟು |
|---|---|---|---|---|---|---|---|---|
| ಪರಿಶಿಷ್ಟ ಜಾತಿ | - | 01 | 02 | 01 | - | - | - | 04 |
| ಪರಿಶಿಷ್ಟ ಪಂಗಡ | 01 | - | - | - | - | - | - | 01 |
| ಪ್ರವರ್ಗ 1 | 01 ಬಾಕ್‌ಲಾಗ್) | 01 | - | - | - | - | - | 02 |
| ಪ್ರವರ್ಗ 2ಎ | - | - | 02 | - | - | - | - | 02 |
| ಪ್ರವರ್ಗ 2ಬಿ | 01 | - | - | - | - | - | - | 01 |
| ಪ್ರವರ್ಗ 3ಎ | - | 01 | - | - | - | - | - | 01 |
| ಪ್ರವರ್ಗ 3ಬಿ | - | - | - | - | - | - | - | - |
| ಸಾಮಾನ್ಯ | - | 01 | 02 | 01 | - | 01 | 01* | 06 |
| ಒಟ್ಟು | 03 | 04 | 06 | 02 | - | 01 | 01* | 17 |

ಸೂಚನೆಃ * ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 128 ಸೇನೆನಿ 2006 ದಿನಾಂಕ 01.08.2009 ರಂತೆ ಈ ಹುದ್ದೆಯು ದೃಷ್ಟಿಮಾಂದ್ಯತೆಯುಳ್ಳ ಅಭ್ಯರ್ಥಿಗೆ ಮೀಸಲಿರಿಸಲಾಗಿದೆ ಮತ್ತು ಅಂತಹ ಸೂಕ್ತ ಅಭ್ಯರ್ಥಿ ಲಭ್ಯವಾಗದಿದ್ದಲ್ಲಿ ಬೇರೆ ಅಂಗವಿಕಲತೆ ಇರುವವರನ್ನು ಆಯ್ಕೆಗೆ ಪರಿಗಣಿಸಲಾಗುವುದು.

ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಯಾವುದೇ ಮುನ್ಸೂಚನೆ ಇಲ್ಲದೆ ಬದಲಾವಣೆಗೆ ಒಳಪಟ್ಟಿರುತ್ತದೆ.

4. **ವೇತನ ಶ್ರೇಣಿ** – ರೂ. 14550-350-15600-400-17200-450-19000-500-21000-600-24600-700-26700 ಹಾಗೂ ಇತರೆ ಭತ್ಯೆಗಳು

5. **ಶೈಕ್ಷಣಿಕ ವಿದ್ಯಾರ್ಹತೆ :**

1) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು
2) ಕನ್ನಡ ಮತ್ತು ಇಂಗ್ಲಿಷ್ ಪ್ರೌಢದರ್ಜೆಯ ಶೀಘ್ರಲಿಪಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು
3) ಕನ್ನಡ ಮತ್ತು ಇಂಗ್ಲಿಷ್ ಪ್ರೌಢದರ್ಜೆಯ ಬೆರಳಚ್ಚು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು
4) ಕಂಪ್ಯೂಟರ್ ಜ್ಞಾನ ಇರುವವರಿಗೆ ಆದ್ಯತೆ ನೀಡಲಾಗುವುದು

## 6. ವಯೋಮಿತಿ:

**ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂತೆ:**

ಕನಿಷ್ಠ ವಯೋಮಿತಿ : 18 ವರ್ಷ

| | | |
|---|---|---|
| ಗರಿಷ್ಠ ವಯೋಮಿತಿ : | ಸಾಮಾನ್ಯ ವರ್ಗ | - 35 ವರ್ಷ |
| | ಪ್ರವರ್ಗ 2ಎ : 2 ಬಿ : 3ಎ : 3ಬಿ | - 38 ವರ್ಷ |
| | ಪ.ಜಾ : ಪ.ಪಂ. : ಪ್ರವರ್ಗ-1 | - 40 ವರ್ಷ |

ಸರ್ಕಾರಿ ಸೇವೆಯಲ್ಲಿರುವವರಿಗೆ, ವಿಧವೆಯರಿಗೆ, ಮಾಜಿ ಸೈನಿಕರಿಗೆ ಹಾಗೂ ಅಂಗವಿಕಲರಿಗೆ ನಿಯಮಾನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು.

## 7. ಆಯ್ಕೆ ವಿಧಾನ :

ಈ ಕೆಳಕಂಡ ನಿಯಮಗಳ ಅನ್ವಯ ನೇರ ನೇಮಕಾತಿಯ ಮೂಲಕ ಆಯ್ಕೆ ಮಾಡಲಾಗುವುದು.

(ಎ) ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಾವಳಿ, 1977

(ಬಿ) ಕರ್ನಾಟಕ ಅಧೀನ ನ್ಯಾಯಾಲಯಗಳು (ಮಿನಿಸ್ಟಿರಿಯಲ್ ಮತ್ತು ಇತರೆ ಹುದ್ದೆಗಳು) (ನೇಮಕಾತಿ) ನಿಯಮಗಳು, 1982.

(ಸಿ) ಕರ್ನಾಟಕ ಅಧೀನ ನ್ಯಾಯಾಲಯಗಳು (ಮಿನಿಸ್ಟಿರಿಯಲ್ ಮತ್ತು ಇತರೆ ಹುದ್ದೆಗಳು) (ನೇಮಕಾತಿ) (ತಿದ್ದುಪಡಿ) ನಿಯಮಗಳು 2007

**ಆಯ್ಕೆಗೆ ಅರ್ಹತಾ ಪರೀಕ್ಷೆ ಮತ್ತು ಸಂದರ್ಶನ ಈ ಕೆಳಕಂಡಂತೆ ನಡೆಸಲಾಗುವುದು.**

(ಎ) ನೇಮಕಾತಿ ಪ್ರಾಧಿಕಾರದಿಂದ ನೇಮಿಸಲಾದ ಪರೀಕ್ಷಕರು ಒಂದು ನಿಮಿಷಕ್ಕೆ 120 ಪದಗಳ ವೇಗದಲ್ಲಿ 05 ನಿಮಿಷಗಳ ಅವಧಿ ಉಕ್ತಲೇಖನವನ್ನು ನೀಡುವರು ಮತ್ತು ಅಭ್ಯರ್ಥಿಯು ಆ ಉಕ್ತಲೇಖನದ ಟಿಪ್ಪಣಿಯನ್ನು 45 ನಿಮಿಷಗಳ ಅವಧಿಯೊಳಗೆ ಲಿಪ್ಯಂತರ ಮಾಡಿ ಬೆರಳಚ್ಚು ಮಾಡಬೇಕು.

(ಬಿ) ಅರ್ಹತಾ ಪರೀಕ್ಷೆಯು ಗರಿಷ್ಠ 100 ಅಂಕಗಳನ್ನು ಹೊಂದಿದ್ದು, ಉತ್ತೀರ್ಣರಾಗಲು ಕನಿಷ್ಠ 50 ಅಂಕಗಳನ್ನು ನಿಗದಿಪಡಿಸಿದೆ.

(ಸಿ) ನಿಗದಿಪಡಿಸಲಾದ ವಿದ್ಯಾರ್ಹತೆಯ ಪರೀಕ್ಷೆಗಳಲ್ಲಿನ ಮತ್ತು ಅರ್ಹತಾ ಪರೀಕ್ಷೆಯ ಒಟ್ಟು ಅಂಕಗಳ ಶೇಕಡವಾರುವಿನ ಮೊತ್ತದ ಆಧಾರದ ಮೇಲೆ 01 (ಒಂದು) ಖಾಲಿ ಹುದ್ದೆಗೆ 05 (ಐದು) ಅಭ್ಯರ್ಥಿಗಳ ಪ್ರಮಾಣದಲ್ಲಿ ಅಧಿಸೂಚನೆಯಲ್ಲಿ ಪ್ರಕಟಪಡಿಸಲಾದ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

## 8. ಪರಿವೀಕ್ಷಣಾ ಅವಧಿ

ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕಾತಿ ನಿಯಮಗಳಂತೆ 2 ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯಲ್ಲಿಡಲಾಗುವುದು.

**9. ಅರ್ಜಿಯೊಡನೆ ಸಲ್ಲಿಸಬೇಕಾದ ದಾಖಲಾತಿಗಳು:**

ಅಭ್ಯರ್ಥಿಗಳು ಕೆಳಕಂಡ ಪ್ರಮಾಣ ಪತ್ರಗಳ ಒಂದೊಂದು ಛಾಯಾ ಪ್ರತಿ (ಫೋಟೋಕಾಪಿ : ಜೆರಾಕ್ಸ್) ಗಳನ್ನು ಸ್ವಯಂ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು. ಅರ್ಜಿಯೊಂದಿಗೆ ದಾಖಲಾತಿಗಳ ಮೂಲ ಪ್ರತಿ (ಒರಿಜಿನಲ್) ಗಳನ್ನು ಲಗತ್ತಿಸಬಾರದು.

(ಎ) ಜನ್ಮ ದಿನಾಂಕವನ್ನು ನಮೂದಿಸಿರುವ ದಾಖಲಾತಿ (ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣಪತ್ರ)

(ಬಿ) ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ ಅಂಕಪಟ್ಟಿಗಳು ಹಾಗೂ ಪ್ರಮಾಣ ಪತ್ರಗಳು.

(ಸಿ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಹಾಗೂ ಇತರೆ ಪ್ರವರ್ಗಗಳ ಜಾತಿ ಪ್ರಮಾಣ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ (ಮೀಸಲಾತಿ ಅಥವಾ ವಯೋಮಿತಿ ಸಡಿಲಿಕೆ ಕೋರಿದ್ದಲ್ಲಿ)

(ಡಿ) ಇತರ ಯಾವುದೇ ನಿಯಮಗಳ ಅನ್ವಯ ವಯೋಮಿತಿ ಸಡಿಲಿಕೆ ಕೋರಿದ್ದಲ್ಲಿ ಸಂಬಂಧಿತ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

(ಈ) ಕನ್ನಡ ಮಾಧ್ಯಮ: ಗ್ರಾಮೀಣ ಅಭ್ಯರ್ಥಿಯಾಗಿದ್ದು ಮೀಸಲಾತಿ ಕೋರಿದ್ದಲ್ಲಿ, ಮೀಸಲಾತಿ ಪ್ರಮಾಣ ಪತ್ರ ನಿಗದಿತ ನಮೂನೆಯಲ್ಲಿ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೇಲು ಸಹಿ ಹೊಂದಿರತಕ್ಕದ್ದು)

(ಎಫ್) ಯೋಜನಾ ನಿರಾಶ್ರಿತ: ಮಾಜಿ ಸೈನಿಕ ಅಭ್ಯರ್ಥಿಯಾಗಿದ್ದು ಮೀಸಲಾತಿ ಕೋರಿದ್ದಲ್ಲಿ, ಮೀಸಲಾತಿ ಪ್ರಮಾಣ ಪತ್ರ ನಿಗದಿತ ನಮೂನೆಯಲ್ಲಿ

(ಜಿ) ಅಂಗವಿಕಲ ಅಭ್ಯರ್ಥಿಗಳು ಸರ್ಕಾರದ ಅಧಿಕೃತ ಜ್ಞಾಪನಸಂಖ್ಯೆ ಸಿಆಸುಇ 115 ಸೇನೆನಿ 2005 ದಿನಾಂಕ 19.11.2005ರಲ್ಲಿ ನಿಗದಿಪಡಿಸಿರುವ ವೈದ್ಯಕೀಯ ಪ್ರಮಾಣ ಪತ್ರದ ನಮೂನೆಯಲ್ಲಿಯೇ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

(ಹೆಚ್) ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಸಂಬಂಧಿತ ನೇಮಕಾತಿ ಪ್ರಾಧಿಕಾರದಿಂದ ಪಡೆದ ಸೇವಾ ಮತ್ತು ನಿರಾಕ್ಷೇಪಣಾ ಪ್ರಮಾಣ ಪತ್ರ ಸಲ್ಲಿಸತಕ್ಕದು.

(ಐ) ಅಭ್ಯರ್ಥಿಯು ವಿದ್ಯಾಭ್ಯಾಸ ಮಾಡಿದ ಶಾಲಾ ಮುಖ್ಯೋಪಾಧ್ಯಾಯರಿಂದ ಪಡೆದ ಒಂದು ನಡತೆ ಪ್ರಮಾಣ ಪತ್ರ.

(ಜೆ) ಅಭ್ಯರ್ಥಿಯ ನಡತೆಯನ್ನು ದೃಢಿಕರಿಸುವ ಬಗ್ಗೆ ಅವನು ಓದಿರುವ ವಿದ್ಯಾಸಂಸ್ಥೆಗಳಿಗೆ ಸಂಬಂಧಪಡದ ಹಾಗೂ ಅಭ್ಯರ್ಥಿಯ ಸಂಬಂಧಿಗಳಲ್ಲದ ಇಬ್ಬರು ಸ್ಥಳೀಯ ಗಣ್ಯವ್ಯಕ್ತಿಗಳಿಂದ ಪಡೆದ 6 (ಆರು) ತಿಂಗಳ ಈಚೆಗಿನ ಎರಡು ನಡತೆ ಪ್ರಮಾಣ ಪತ್ರಗಳು.

(ಕೆ) ಅರ್ಜಿಯೊಂದಿಗೆ 25.00 ರೂಪಾಯಿಯ ಅಂಚೆ ಚೀಟಿ (Postal Stamp) ವನ್ನು ಹೊಂದಿರುವ ಸ್ವವಿಳಾಸದ ಲಕೋಟೆಯನ್ನು ಸಲ್ಲಿಸತಕ್ಕದ್ದು

10. ಇತರೆ ಸೂಚನೆಗಳು :

(ಎ) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.

(ಬಿ) ನಿಗದಿತ ಅರ್ಜಿ ನಮೂನೆಯ ಬೆರಳಚ್ಚು ಪ್ರತಿ : ಗಣಕೀಕೃತ ಪ್ರತಿಯ ಎಲ್ಲಾ ಅಂಕಣಗಳನ್ನು ನಿಗದಿತ ಉತ್ತರಗಳಿಂದ ಭರ್ತಿ ಮಾಡಿರತಕ್ಕದ್ದು. ಅಭ್ಯರ್ಥಿಗಳು ಅರ್ಜಿಯ ಎಲ್ಲಾ ಕಾಲಂಗಳನ್ನು ಸ್ವಂತ ಕೈಬರಹದಿಂದ ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು.

(ಸಿ) ಅಭ್ಯರ್ಥಿಯು ಅರ್ಜಿಯ ನಿಗದಿತ ಜಾಗದಲ್ಲಿ ತನ್ನ ಇತ್ತೀಚಿನ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಲಗತ್ತಿಸತಕ್ಕದ್ದು ಹಾಗೂ ಅರ್ಜಿ ಮತ್ತು ಭಾವಚಿತ್ರ ಎರಡಕ್ಕೂ ಸೇರುವಂತೆ ಸಹಿಯನ್ನು ಮಾಡತಕ್ಕದ್ದು.

(ಡಿ) ಅಭ್ಯರ್ಥಿಯು ಕೇವಲ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸತಕ್ಕದ್ದು. ಒಂದಕ್ಕಿಂತ ಹೆಚ್ಚಿನ ಅರ್ಜಿಗಳನ್ನು ಸಲ್ಲಿಸಲಾಗಿದ್ದಲ್ಲಿ ಯಾವುದಾದರೂ ಒಂದು ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು.

**(ಈ) ಕೊನೆಯ ದಿನಾಂಕದ ನಂತರ ಸ್ವೀಕೃತಗೊಂಡ ಅರ್ಜಿಗಳನ್ನು, ಅಭ್ಯರ್ಥಿಯ ಸಹಿ ಇಲ್ಲದ ಅರ್ಜಿಗಳನ್ನು, ಸಂಪೂರ್ಣ ಸರಿಯಾಗಿ ವಿವರಗಳನ್ನು ಸ್ವಂತ ಕೈಬರಹದಿಂದ ತುಂಬಿರದ : ನಮೂದಿಸಿಲ್ಲದ ಅರ್ಜಿಗಳನ್ನು, ಅಗತ್ಯವಾದ ದಾಖಲಾತಿಗಳನ್ನು ಸಲ್ಲಿಸಿರದ ಅರ್ಜಿಗಳನ್ನು ಯಾವುದೇ ಸೂಚನೆ ಕೊಡದೆ ತಿರಸ್ಕರಿಸಲಾಗುವುದು. ಈ ಬಗ್ಗೆ ಯಾವುದೇ ಪತ್ರ ವ್ಯವಹಾರಕ್ಕೆ ಅಸ್ಪದವಿರುವುದಿಲ್ಲ.**

(ಎಫ್) ಅರ್ಹತಾ ಪರೀಕ್ಷೆಗೆ ಮತ್ತು ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಸಂದರ್ಶನಕ್ಕೆ ಹಾಜರಾಗಬೇಕು ಹಾಗೂ ಈ ಸಂಬಂಧ ಪತ್ರ ಬಾರದ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಗೆ /ಸಂದರ್ಶನಕ್ಕೆ ಅರ್ಹರಲ್ಲವೆಂದು ಭಾವಿಸಕೊಳ್ಳತಕ್ಕದ್ದು.

(ಜಿ) ಆಯ್ಕೆಯ ಸಂಬಂಧವಾಗಿ ಅರ್ಹತಾ ಪರೀಕ್ಷೆಗೆ /ಸಂದರ್ಶನಕ್ಕೆ ಅನರ್ಹರಾದ ಅಭ್ಯರ್ಥಿಗಳು ಈ ಕಛೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸಲು ಅಸ್ಪದವಿರುವುದಿಲ್ಲ.

(ಹೆಚ್) ಅಭ್ಯರ್ಥಿಯ ಹುದ್ದೆಗೆ ಅಗತ್ಯವಾದ ದೈಹಿಕ ಕ್ಷಮತೆ : ದೇಹದಾರ್ಢ್ಯತೆ ಹೊಂದಿರುವ ಬಗ್ಗೆ ನೇಮಕಾತಿ ಪ್ರಾಧಿಕಾರ ತೃಪ್ತಿ : ಸಮಾಧಾನ ಹೊಂದದಿದ್ದಲ್ಲಿ ಅಂತಹ ಅಭ್ಯರ್ಥಿಯು ನೇಮಕಾತಿಗೆ ಅರ್ಹರಾಗುವುದಿಲ್ಲ.

(ಐ) ಯಾವುದೇ ಅಭ್ಯರ್ಥಿಯು ನೇಮಕಾತಿ : ಆಯ್ಕೆ ಬಗ್ಗೆ ಯಾರಿಂದಲಾದರೂ ಯಾವುದೇ ತರಹದ ಶಿಫಾರಸು : ವಶೀಲಿ : ಒತ್ತಡ ತಂದಲ್ಲಿ ಅಂತಹ ಅಭ್ಯರ್ಥಿಯು ನೇಮಕಾತಿಗೆ ಅನರ್ಹರಾಗುತ್ತಾರೆ.

Sd/-
(ರತ್ನಕಲಾ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

Chief Administrative Officer
District & Sessions Court
Bangalore Rural District
Bangalore

# ಅರ್ಜಿ ನಮೂನೆ
## ಶೀಘ್ರಲಿಪಿಗಾರರ ಹುದ್ದೆಗೆ ಅರ್ಜಿ

ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರವನ್ನು ಅಂಟಿಸಬೇಕು.
ಅರ್ಜಿ ಮತ್ತು ಭಾವಚಿತ್ರ ಎರಡರ ಮೇಲೂ ಬರುವಂತೆ ಸಹಿ ಮಾಡಬೇಕು.

ಗೆ

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ತಳಮಹಡಿ,
ನಗರ ಸಿವಿಲ್ ನ್ಯಾಯಾಲಯಗಳ ಸಂಕೀರ್ಣ,
ಬೆಂಗಳೂರು- 560 009.

ಮಾನ್ಯರೆ,

ತಮ್ಮ ನ್ಯಾಯಾಲಯದ ಅಧಿಸೂಚನೆ ಸಂಖ್ಯೆ: ಎಡಿಎಂ/97/2013 ದಿನಾಂಕ 19.03.2013 ರ ಪ್ರಕಟಣೆ ಮೇರೆಗೆ ನಾನು ಕೆಳಕಂಡ ಮಾಹಿತಿಗಳೊಂದಿಗೆ ಶೀಘ್ರಲಿಪಿಗಾರರ ಹುದ್ದೆಗೆ ನನ್ನ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ.

| | | |
|---|---|---|
| 1 | ಅಭ್ಯರ್ಥಿಯ ಹೆಸರು (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಇದ್ದಂತೆ) | |
| 2 | ತಂದೆಯ ಹೆಸರು | |
| 3 | ತಾಯಿಯ ಹೆಸರು | |
| 4 | ಪೂರ್ಣ ವಿಳಾಸ | |
| 5 | ದೂರವಾಣಿ ಸಂಖ್ಯೆ | |
| 6 | ಹುಟ್ಟಿದ ದಿನಾಂಕ (ಸೂಕ್ತ ದಾಖಲಾತಿ ಲಗತ್ತಿಸತಕ್ಕದ್ದು) | |
| 7 | ವಯಸ್ಸು (ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂತೆ) | |
| 8 | ವಯೋಮಿತಿ ಸಡಿಲಿಕೆ ಕೋರಿರುವಿರಾ? (ಹಾಗಿದ್ದಲ್ಲಿ ಸೂಕ್ತ ದಾಖಲಾತಿಯನ್ನು ಲಗತ್ತಿಸತಕ್ಕದ್ದು) | |

<table>
<tr><td>9</td><td>ಲಿಂಗ : ಗಂಡು : ಹೆಣ್ಣು</td><td colspan="4"></td></tr>
<tr><td>10</td><td>ವಿವಾಹಿತರೇ : ಅವಿವಾಹಿತರೇ</td><td colspan="4"></td></tr>
<tr><td>11</td><td>ವಿವಾಹಿತರಾಗಿದ್ದರೆ,<br>ಗಂಡ : ಹೆಂಡತಿಯ ಹೆಸರು</td><td colspan="4"></td></tr>
<tr><td>12</td><td>ಅಭ್ಯರ್ಥಿಯ ಹಾಲಿ ಉದ್ಯೋಗ, ಅದರ ವಿವರ ಮತ್ತು ತಿಂಗಳ ವರಮಾನ<br>(ಸರ್ಕಾರಿ ಸೇವೆಯಲ್ಲಿ ಇದ್ದಲ್ಲಿ ನಿರಾಕ್ಷೇಪಣಾ ಪತ್ರ ಸಲ್ಲಿಸತಕ್ಕದ್ದು)</td><td colspan="4"></td></tr>
<tr><td>13</td><td>ಪೋಷಕರ ಉದ್ಯೋಗ ಮತ್ತು ಅದರ ವಿವರ</td><td colspan="4"></td></tr>
<tr><td>14</td><td>ಪೋಷಕರ ವರಮಾನ</td><td colspan="4"></td></tr>
<tr><td>15</td><td>ಗಂಡ : ಹೆಂಡತಿಯ ಉದ್ಯೋಗ ಮತ್ತು ಅದರ ವಿವರ<br>(ವಿವಾಹಿತರಾಗಿದ್ದಲ್ಲಿ)</td><td colspan="4"></td></tr>
<tr><td>16</td><td>ಗಂಡ : ಹೆಂಡತಿಯ ವರಮಾನ</td><td colspan="4"></td></tr>
<tr><td>17</td><td>ರಾಷ್ಟ್ರೀಯತೆ</td><td colspan="4"></td></tr>
<tr><td>18</td><td>ಧರ್ಮ</td><td colspan="4"></td></tr>
<tr><td rowspan="4">19</td><td rowspan="4">ಮುಂದೆ ನಮೂದಿಸಿರುವ ಗುಂಪುಗಳಲ್ಲಿ ನಿಮಗೆ ಸಂಬಂಧಪಟ್ಟ ಅಂಕಣದಲ್ಲಿ ಗುರುತು ಹಾಕಿ.<br>(ಸಾಮಾನ್ಯ ಅರ್ಹತೆ ಅಭ್ಯರ್ಥಿಗಳನ್ನು ಹೊರತುಪಡಿಸಿ ಇತರೆ ಅಭ್ಯರ್ಥಿಗಳು ಸಂಬಂಧಪಟ್ಟ ದಾಖಲಾತಿಗಳನ್ನು ಲಗತ್ತಿಸತಕ್ಕದ್ದು)</td><td>ಸಾಮಾನ್ಯ ಅರ್ಹತೆ</td><td></td><td>ಪ್ರವರ್ಗ-2ಎ</td><td></td></tr>
<tr><td>ಪ. ಜಾತಿ</td><td></td><td>ಪ್ರವರ್ಗ-2ಬಿ</td><td></td></tr>
<tr><td>ಪ. ಪಂಗಡ</td><td></td><td>ಪ್ರವರ್ಗ-3ಎ</td><td></td></tr>
<tr><td>ಪ್ರವರ್ಗ-1</td><td></td><td>ಪ್ರವರ್ಗ-3ಬಿ</td><td></td></tr>
<tr><td>20</td><td>ಕನ್ನಡ ಮಾಧ್ಯಮ: ಗ್ರಾಮೀಣ: ಯೋಜನಾ ನಿರಾಶ್ರಿತ: ಮಾಜಿ ಸೈನಿಕ ಅಭ್ಯರ್ಥಿಯಾಗಿದ್ದು ಮೀಸಲಾತಿ ಕೋರಿದ್ದಲ್ಲಿ ನಮೂದಿಸಿರಿ<br>(ಸಂಬಂಧಪಟ್ಟ ದಾಖಲಾತಿಗಳನ್ನು ಲಗತ್ತಿಸತಕ್ಕದ್ದು)</td><td colspan="4"></td></tr>
</table>

| 21 | ಶೈಕ್ಷಣಿಕ ವಿದ್ಯಾರ್ಹತೆ (ಸ್ವಯಂ ದೃಢೀಕೃತ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು) | ಉತ್ತೀರ್ಣ ಹೊಂದಿದ ವರ್ಷ | ನೊಂದಣಿ ಸಂಖ್ಯೆ | ಗರಿಷ್ಟ ಅಂಕಗಳು | ಪಡೆದಿರುವ ಅಂಕಗಳು | ಶೇಕಡವಾರು ಅಂಕಗಳು |
|---|---|---|---|---|---|---|
| | ಎಸ್.ಎಸ್.ಎಲ್.ಸಿ. | | | | | |
| | ಕನ್ನಡ ಪ್ರೌಢದರ್ಜೆ ಶೀಘ್ರಲಿಪಿ ಪರೀಕ್ಷೆ | | | | | |
| | ಇಂಗ್ಲಿಷ್ ಪ್ರೌಢದರ್ಜೆ ಶೀಘ್ರಲಿಪಿ ಪರೀಕ್ಷೆ | | | | | |
| | ಕನ್ನಡ ಪ್ರೌಢದರ್ಜೆ ಬೆರಳಚ್ಚು ಪರೀಕ್ಷೆ | | | | | |
| | ಇಂಗ್ಲಿಷ್ ಪ್ರೌಢದರ್ಜೆ ಬೆರಳಚ್ಚು ಪರೀಕ್ಷೆ | | | | | |
| 22 | ಮೇಲೆ ನಮೂದಿಸಿರುವುದಕ್ಕಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿದ್ದರೆ ಆ ಬಗ್ಗೆ ವಿವರ ನೀಡಿ | | | | | |
| 23 | ಯಾವುದಾದರೂ ಅಪರಾಧದಲ್ಲಿ ಭಾಗಿಯಾಗಿರುವಿರೇ? ಹೌದಾದಲ್ಲಿ ವಿವರ ನೀಡುವುದು | | | | | |
| 24 | ಲಗತ್ತಿಸಿರುವ ದಾಖಲಾತಿಗಳ ಪಟ್ಟಿಯನ್ನು ನಮೂದಿಸುವುದು. (ನೀವು ಅರ್ಜಿಯ ಜೊತೆ ಲಗತ್ತಿಸಿದ ದಾಖಲಾತಿಗಳ ಮೂಲ ಪ್ರತಿಗಳನ್ನೇ ಸಂದರ್ಶನಕ್ಕೆ ಕರೆದಾಗ ಹಾಜರುಪಡಿಸತಕ್ಕದ್ದು) | | | | | |
| | | | | | | |

ಈ ಮೇಲ್ಕಂಡ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯ ಮತ್ತು ಸರಿಯಾಗಿವೆಯೆಂದು ಪ್ರಮಾಣಿಕರಿಸುತ್ತೇನೆ ಮತ್ತು ಒಂದು ವೇಳೆ ಮೇಲ್ಕಂಡ ಮಾಹಿತಿಗಳು ತಪ್ಪು ಎಂದು ಕಂಡುಬಂದಲ್ಲಿ ನನ್ನ ಅಭ್ಯರ್ಥಿತನವನ್ನು ರದ್ದುಪಡಿಸಬಹುದು ಎಂದು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ :

ಸ್ಥಳ : ಅಭ್ಯರ್ಥಿಯ ಸಹಿ

ಸೂಚನೆ:

1. ಅಭ್ಯರ್ಥಿಯು ಅಧಿಸೂಚನೆಯಲ್ಲಿ ಪ್ರಕಟಿಸಿರುವ ಎಲ್ಲಾ ಸೂಚನೆಗಳನ್ನು ಗಮನವಿಟ್ಟು ಓದಿ ಅರ್ಜಿಯನ್ನು ಸಮರ್ಪಕವಾಗಿ ಭರ್ತಿ ಮಾಡಿ ಅಧಿಸೂಚನೆಯಲ್ಲಿ ಸೂಚಿಸಿರುವ ಎಲ್ಲಾ ದಾಖಲಾತಿಗಳನ್ನು ಮತ್ತು 25 ರೂಪಾಯಿಯ ಅಂಚೆ ಚೀಟಿ (Postal Stamp) ವನ್ನು ಹೊಂದಿರುವ ಸ್ವವಿಳಾಸದ ಲಕೋಟೆಯನು ಲಗತಿಸಿರಬೇಕು